**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 27/2017** **ಫ್ರಾ.ಸಾ.16**

**ಚಾ.ಸಾ.25**

ಸಾಕ್ಷಿದಾರರ ಹೆಸರು - ಸಂಪ
ಗಂಡನ ಹೆಸರು - ಶಂಕರ ಕುಲಾಲ
ವಯಸ್ಸು - 60 ವರ್ಷ
ಉದ್ಯೋಗ - ಗೃಹಿಣಿ
ವಿಳಾಸ - ವರ್ವಾಡಿ.

ದಿನಾಂಕಃ 25-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ಒಂದನೇ ಆರೋಪಿ ನನ್ನ ಮಗ. ಆತ ಸುಮಾರು 8 ವರ್ಷದ ಹಿಂದೆ ಕೊಲೆಯಾಗಿದ್ದಾನೆ. ನನ್ನ ಮಗ ಜೀವಿತ ಕಾಲದಲ್ಲಿ ರೌಡಿ ಆಗಿದ್ದ. ಆ ಕಾಲದಲ್ಲಿ ಆತ ಕೆಲವೊಂದು ದಿನ ಮನೆಗೆ ಬರುತ್ತಿದ್ದು, ಕೆಲವೊಂದು ದಿನ ಮನೆಗೆ ಬರುತ್ತಿರಲಿಲ್ಲ. ಅಲ್ಲದೆ ಆತ ಯಾವಾಗಲೂ ಮದ್ಯ ಸೇವನೆ ಮಾಡುತ್ತಿದ್ದ. ಆ ಸಮಯದಲ್ಲಿ ನಾನು ನನ್ನ ಗಂಡ ಮತ್ತು ಮಗ ಮನೆಯಲ್ಲಿ ಇರುತ್ತಿದ್ದೆವು. ನನ್ನ ಗಂಡ ಕೃಷಿ ಕೆಲಸ ಮಾಡುತ್ತಾರೆ. ಹಾಗೆ ಆತ ಮನೆಗೆ ಬಂದು ಹೋಗುವಾಗ ಯಾವಾಗಲೂ ಕಾರಿನಲ್ಲಿ ಬರುತ್ತಿದ್ದ. ಕಾರನ್ನು ಬಿಟ್ಟರೆ ಬೇರೆ ಯಾವುದೇ ವಸ್ತುಗಳನ್ನು ಆತ ಮನೆಗೆ ತರುತ್ತಿರಲಿಲ್ಲ.

2. ಚಾಸಾ16 ಕೊರಂಗ್ರಪಾಡಿ ವಿಶ್ವನಾಥ ಶೆಟ್ಟಿ ಇವರ ಪರಿಚಯ ಇದೆ. ಅವರಿಂದ ನನ್ನ ಮಗ ಒಮ್ಮೆ ಏರ್ ಗನ್ ತಂದಿದ್ದನು. ಆದರೆ ಸದ್ರಿ ಏರ್ ಗನ್ ನ್ನು ನಾನು ನೋಡಿರುವುದಿಲ್ಲ. ನನಗೆ ಚಾಸಾ1 ರಿಂದ 6 ರವರನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ನನ್ನ ಮಗ ಮೃತ ಒಂದನೇ ಆರೋಪಿ ಚಾಸಾ1 ರಿಂದ 6 ರವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿರುವುದಿಲ್ಲ.

3. ನನ್ನ ಮಗ ಈ ಪ್ರಕರಣದಲ್ಲಿ ಕೊಲೆಯಾದ ಸಂತೋಷ ನಾಯಕ್ ಈತನನ್ನು ಕೊಲೆ ಮಾಡಿರುವ ವಿಚಾರ ನಾನು ಕೇಳಿ ತಿಳಿದಿದ್ದೆ. ಈ ಪ್ರಕರಣದಲ್ಲಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನನ್ನ ಮಗ ಒಂದನೇ ಆರೋಪಿ ವಿಶ್ವನಾಥ ಶೆಟ್ಟಿ ಇವರಿಂದ ಏರ್ ಗನ್ ಅನ್ನು ತಂದು ನಮ್ಮ ಮನೆಯಲ್ಲಿ ಇಟ್ಟಿರುವ ವಿಚಾರ ಮತ್ತು ಚಾಸಾ1 ರಿಂದ 7 ಇವರನ್ನು ನಮ್ಮ ಮನೆಗೆ ಅಪಹರಿಸಿ ಕರೆದುಕೊಂಡು ಬಂದ ವಿಚಾರ ನಾನು ಪೋಲಿಸರಿಗೆ ಹೇಳಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ**

1. ನನ್ನ ಮಗ ಮೃತ ಒಂದನೇ ಆರೋಪಿ ನವೆಂಬರ್ ಕೊನೆಯ ವಾರದಲ್ಲಿ ಒಂದುಕ ಏರ್ ಗನ್ ತಂದಿದ್ದು ಅದರ ಬಗ್ಗೆ ನಾನು ವಿಚಾರಿಸಿದಾಗ ವಿಶ್ವನಾಥ ಶೆಟ್ಟಿ ಕೊರಂಗ್ರಪಾಡಿ ಇವರಿಂದ ನಾನು ತೆಗೆದುಕೊಂಡು ಬಂದಿದ್ದೇನೆ ಎಂದು ತಿಳಿಸಿದು ಅದನ್ನು ಏಕೆ ತಂದೆ ಎಂದು ಕೇಳಿದಾಗ ತೋಟಕ್ಕೆ ಬರುವ ಮಂಗಗಳನ್ನು ಹೆದರಿಸಲು ತಂದಿದ್ದೇನೆ ಎಂದು ತಿಳಿಸಿದ್ದು, ಅಲ್ಲದೆ ಆತನಲ್ಲಿ ಒಂದು ಪಿಸ್ತೂಲು ಕೂಡ ಇದ್ದಿದ್ದು ಅದನ್ನು ಮನೆಯಿಂದ ಹೊರಗೆ ಹೋಗುವಾಗ ಯಾವಾಗಲೂ ಕಿಸೆಯಲ್ಲಿ ಇಟ್ಟುಕೊಂಡು ಹೋಗುತ್ತಿದ್ದನು ಎಂದರೆ ಸರಿಯಲ್ಲ.

2. ದಿನಾಂಕ 02-12-2016 ರಂದು ಒಂದನೇ ಆರೋಪಿ ಮಂಗಳೂರಿನಿಂದ ಕಾರಿನಲ್ಲಿ ಬಂದಿದ್ದು ಅವನೊಂದಿಗೆ ಆತನ ಸ್ನೇಹಿತರು ಇದ್ದು, ನಂತರ ಅವರೊಂದಿಗೆ ಪ್ರವೀಣ್ ಏರ್ ಗನ್ ಅನ್ನು ತೆಗೆದುಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ. ದಿನಾಂಕ 03-12-2016 ರಂದು ಬೆಳಿಗ್ಗೆ 6-30 ಗಂಟೆಗೆ ಆರೋಪಿ ನನ್ನ ಮಗ ಪ್ರವೀಣ್ ಬಿಳಿ ಕಾರಿನಲ್ಲಿ ಮೂರು ಹೆಂಗಸರನ್ನು ಮತ್ತು ಎರಡು ಮಕ್ಕಳನ್ನು ಕರೆದುಕೊಂಡು ಬಂದಿದ್ದು, ಆ ಸಮಯ ಉಳಿದ ಆರೋಪಿತರು ಆತನ ಕಾರಿನಲ್ಲಿ ಇದ್ದು ಈ ಬಗ್ಗೆ ನಾನು ಆರೋಪಿಯಲ್ಲಿ ವಿಚಾರಿಸಿದಾಗ, ಇದೆಲ್ಲಾ ನಿನಗೆ ಬೇಡ ಎಂದು ಹೇಳಿ ಬಳಿಕ ಪೋನಿನಲ್ಲಿ ಮಾತನಾಡುತ್ತಿದ್ದ ಎಂದರೆ ಸರಿಯಲ್ಲ. ನಂತರ ನಮ್ಮ ಮನೆಯಲ್ಲಿದ್ದ ಮೂರು ಹೆಂಗಸರನ್ನು ಮತ್ತು ಎರಡು ಮಕ್ಕಳನ್ನು ಬಿಳಿ ಕಾರಿನಲ್ಲಿ ಕರೆದುಕೊಡು ಹೋದ ಎಂದರೆ ಸರಿಯಲ್ಲ. ಚಾಸಾ 16 ರವರು ಏರ್

ಗನ್ ನನ್ನು ನಮ್ಮ ಮನೆಯಿಂದ ತೆಗೆದುಕೊಂಡು ಹೋದ ಎಂದರೆ ಸರಿಯಲ್ಲ. ಸ್ವದ್ರಿ ಹೇಳಿಕೆಯ ಭಾಗಗಳನ್ನು ಒಟ್ಟಾಗಿ ನಿಪಿ-57 ಎಂದು ಗುರುತಿಸಲಾಯಿತು. ಆರೋಪಿತರು ಮಗನ ಸ್ನೇಹಿತರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ವಕೀಲರಿಂದ** -ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.